


# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ


**ಕಾಂಗ್ರೆಸ್**

ಶಿಕಾರಿಪುರ, ಆನವಟ್ಟಿ, ಶಿರಾಳಕೊಪ್ಪ ಭರ್ಜರಿ ರೋಡ್ ಶೋ


ಸೋಮವಾರ,6ನೇ ಮೇ,2024 | ● ಸಂಪುಟ-1 | ● ಸಂಚಿಕೆ-72 | ● ಉಚಿತ | ● | ● www.suddisanchaari.in





**ಶಿರಾಳಕೊಪ್ಪ**

ಶಿರಾಳಕೊಪ್ಪದಲ್ಲಿ ಭಾನುವಾರ ಬಿ.ವೈ. ವಿಜಯೇಂದ್ರ ಬಿಜೆಪಿ ಅಭ್ಯರ್ಥಿ ಬಿ.ವೈ. ರಾಘವೇಂದ್ರ ಪರ ಪ್ರಚಾರ ನಡೆಸಿದರು

**Top News** ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಚಾರ

## ರಾಹುಲ್ ಗಾಂದಿಗೆ ಕೇರಳದಲ್ಲೂ ಸೋಲು ಖಚಿತ

ಸುದ್ದಿ-ಸಂಚಾರಿ

ಶಿರಾಳಕೊಪ್ಪ: 'ಕಾಂಗ್ರೆಸ್ ಅಭ್ಯರ್ಥಿ ರಾಹುಲ್ ಗಾಂಧಿ ಅಲ್ಪಸಂಖ್ಯಾತರ ಪ್ರಾಬಲ್ಯ ಇರುವ ಕೇರಳದ ವಯನಾಡು ಕ್ಷೇತ್ರದಲ್ಲಿ ಸೋಲುವ ಭಯದಿಂದ ಉತ್ತರ ಪ್ರದೇಶದ ರಾಯಬರೇಲಿಯಿಂದಲೂ ಸ್ಪರ್ಧಿಸಲು ನಿರ್ಧರಿಸಿರುವುದು ನಾಚಿಕೆಗೇಡಿನ ಸಂಗತಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಲೇವಡಿ ಮಾಡಿದರು.

ಪಟ್ಟಣದ ಬಸ್‌ನಿಲ್ದಾಣದ ವೃತ್ತದಲ್ಲಿ ಭಾನುವಾರ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ವೈ. ರಾಘವೇಂದ್ರ ಪರ ರೋಡ್ ಶೋ ನಡೆಸಿ ಮಾತನಾಡಿದರು.

'ರಾಹುಲ್ ಗಾಂಧಿಯವರು ಅಮೇಠಿ ಕ್ಷೇತ್ರದಲ್ಲಿ ಸೋಲುವ ಬಗ್ಗೆ ತಿಳಿದು, ವಯನಾಡು ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದರು. ಅಲ್ಪಸಂಖ್ಯಾತರು ಶೇ 65ರಿಂದ 70ರಷ್ಟು ಇರುವುದರಿಂದ ಈ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದಾರೆ. ಆದರೆ, ಈ ಬಾರಿ ಅಲ್ಲಿಯೂ ಸೋಲುವುದು ಖಚಿತವಾಗಿದೆ. ಹೀಗಾಗಿ ರಾಯಬರೇಲಿಯಿಂದಲೂ ಸ್ಪರ್ಧಿಸಿದ್ದಾರೆ' ಎಂದು ದೂರಿದ್ದಾರೆ.

'ಕಾಂಗ್ರೆಸ್ ಪಕ್ಷದ ನಾಯಕರು ಬಹುಸಂಖ್ಯಾತರ ಭಾವನೆಗಳಿಗೆ ಧಕ್ಕೆ ಮಾಡುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಮೇ 7 ನರೇಂದ್ರ ಮೋದಿ ಅವರನ್ನು ಬಲಪಡಿಸುವ ದಿನ. 10 ವರ್ಷಗಳಿಂದ ಭ್ರಷ್ಟಾಚಾರ ರಹಿತ ಆಡಳಿತ ನೀಡಿದ್ದಾರೆ. 10 ವರ್ಷಗಳಿಂದ ರಾಘವೇಂದ್ರ ಕ್ರಿಯಾಶೀಲ ಸಂಸದರಾಗಿ ಕೆಲಸ ಮಾಡಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದ ಮೇಲೆ ನಿಮ್ಮನ್ನು ಭೇಟಿಯಾಗುವುದು ಐದು ವರ್ಷಗಳ ನಂತರ .ಆದರೆ, ರಾಘವೇಂದ್ರ ಅವರ ಅಭಿವೃದ್ಧಿ ಕಾರ್ಯವನ್ನು ವಿರೋಧ ಪಕ್ಷದವರು ಹೊಗಳುತ್ತಿದ್ದಾರೆ' ಎಂದರು.

'ಮಾಜಿ ಪ್ರಧಾನಿ ದೇವೆಗೌಡರು ಈ ದೇಶದ ಭದ್ರತೆ ದೃಷ್ಟಿಯಿಂದ ಮೋದಿ ಅವರನ್ನು ಬೆಂಬಲಿಸಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಒಗ್ಗೂಡಿ ಬಿಜೆಪಿ ಅಭ್ಯರ್ಥಿ ಬಿ.ವೈ. ರಾಘವೇಂದ್ರ ಅವರನ್ನು 2 ಲಕ್ಷಕ್ಕಿಂತ ಹೆಚ್ಚಿನ ಅಧಿಕ ಮತದಿಂದ ಗೆಲ್ಲಿಸಿ' ಎಂದು ಮನವಿ ಮಾಡಿದರು. ಚಿತ್ರನಟಿ ತಾರಾ ಅನುರಾಧ ಭಾಗವಹಿಸಿ ಮೆರುಗು ನೀಡಿದರು. ಮುಖಂಡರಾದ ರಘು ಕೌಟಿಲ್ಯ, ಕೊಳಗಿ ರೇವಣಪ್ಪ, ಎ.ಸಿ. ಚನ್ನವೀರಪ್ಪ, ಡಿಸಿಸಿ ಬ್ಯಾಂಕ್ ನಿರ್ದೇಶಕ ಅಗಡಿ ಅಶೋಕ, ಸಣ್ಣಹನುಮಂತಪ್ಪ, ಗಾಯಿತ್ರಿದೇವಿ ಇದ್ದರು.

**ದತ್ತಾತ್ರಿ**

## 'ರಾಜ್ಯದಲ್ಲಿ ಹಿಂದೂ ವಿರೋಧಿ ಸರ್ಕಾರ'



ಭದ್ರಾವತಿ: 'ರಾಜ್ಯದ ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿಯಾಗಿದ್ದು, ಅಲ್ಪಸಂಖ್ಯಾತರಿಗೆ ಧೈರ್ಯ ತಂದಿದೆ. ಧರ್ಮದ ಆಧಾರದಲ್ಲಿ ಅಲ್ಪಸಂಖ್ಯಾತರಿಗೆ ವಿನಾಯಿತಿ ನೀಡಿದೆ' ಎಂದು ಬಿಜೆಪಿ ರಾಜ್ಯ ಸಂಯೋಜಕ ದತ್ತಾತ್ರಿ ಆರೋಪಿಸಿದರು.

'ಹತ್ತು ವರ್ಷಗಳಲ್ಲಿ ಸಂಸದ ಬಿ.ವೈ. ರಾಘವೇಂದ್ರ ಅವರು ₹ 20,000 ಕೋಟಿ ಅನುದಾನ ತಂದಿದ್ದಾರೆ. ಶಿವಮೊಗ್ಗ ನಗರ ರೂಪಾಂತರಗೊಂಡಿದೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ದೇಶವು ಆರ್ಥಿಕತೆಯಲ್ಲಿ ಮುಂದುವರಿದಿದೆ' ಎಂದು ಹೇಳಿದರು.

ಧರ್ಮಪ್ರಸಾದ್, ಖಾರ ನಾಗರಾಜ್ ಪತ್ರಿಕಾಗೋಷ್ಠಿಯಲ್ಲಿ ಇದ್ದರು.


ಸುದ್ದಿ-ಸಂಚಾರಿ


## 108 ಆಂಬುಲೆನ್ಸ್ ಸಿಬ್ಬಂದಿ ಮುಷ್ಕರ ಇಂದಿನಿಂದ




ಸುದ್ದಿ-ಸಂಚಾರಿ

ಬೆಂಗಳೂರು: ಬಾಕಿ ಉಳಿಸಿಕೊಂಡಿರುವ ವೇತನ ಪಾವತಿಗೆ ಆಗ್ರಹಿಸಿ '108- ಆರೋಗ್ಯ ಕವಚ' ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸೋಮವಾರ ರಾತ್ರಿ 8 ಗಂಟೆಯಿಂದ ಮುಷ್ಕರ ಹಮ್ಮಿಕೊಂಡಿದ್ದಾರೆ. ಇದರಿಂದಾಗಿ ಆಂಬುಲೆನ್ಸ್ ಸೇವೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆಯಿದೆ.

ಯೋಜನೆಯನ್ನು ಜಿವಿಕೆ– ಇಎಂಆರ್‌ಐ ಸಂಸ್ಥೆ ನಿರ್ವಹಿಸುತ್ತಿದ್ದು, 2,500 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ನಿಗದಿ ಪಡಿಸಿದ ವೇತನದಲ್ಲಿ ಡಿಸೆಂಬರ್ ಹಾಗೂ ಜನವರಿ ತಿಂಗಳಲ್ಲಿ ಅರ್ಧದಷ್ಟು ವೇತನ ಮಾತ್ರ ನೀಡಲಾಗಿದ್ದು, ಕಳೆದ 3 ತಿಂಗಳಿಂದ ವೇತನ ಪಾವತಿಸಿಲ್ಲ' ಎಂದು ಆರೋಪಿಸಿರುವ ಸಿಬ್ಬಂದಿ, ಅನಿರ್ದಿಷ್ಟಾವಧಿ ಮುಷ್ಕರಕ್ಕೆ ನಿರ್ಧರಿಸಿದ್ದಾರೆ.

ಬಾಕಿ ವೇತನ ಪಾವತಿಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆ ಹಾಗೂ ಸಂಸ್ಥೆ ಸೋಮವಾರ ಕ್ರಮ ಕೈಗೊಂಡಲ್ಲಿ ಮುಷ್ಕರದಿಂದ ಹಿಂದೆ ಸರಿಯುವುದಾಗಿ 108 ನೌಕರರ ಸಂಘ ತಿಳಿಸಿದೆ.





# ಶಿಕಾರಿಪುರ ಕುಮದ್ವತಿ ಕಾಲೇಜ್ ಪ್ರವೇಶ ಪ್ರಾರಂಭ

## ಸಾವಿನಲ್ಲೂ ಅಂಧರಿಗೆ ಬೆಳಕಾದ ಯುವಕ

ಕಡರನಾಯ್ಕನಹಳ್ಳಿ: ಸಮೀಪದ ಹೊಳೆಸಿರಿಗೆರೆ ಗ್ರಾಮದ ಯುವಕ ಸುನಿಲ್ ಕುಮಾರ್ ಮುನಿಯಪ್ಪ **(22)** ಅವರು ಭಾನುವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಅವರ ನೇತ್ರಗಳನ್ನು ದಾವಣಗೆರೆ ಚಿಗಟೇರಿ ಆಸ್ಪತ್ರೆಗೆ ನೀಡಲಾಗಿದೆ.
ಇವರು ಹನುಮಂತಪ್ಪ ಮುನಿಯಪ್ಪ-ಮಮತಾ ಅವರ ಪುತ್ರ. ಅವರ ಪಾಲಕರು ಮಗನ ನೇತ್ರಗಳನ್ನು ದಾನ ಮಾಡುವ ಮೂಲಕ ಅಂಧರಿಗೆ ಅನುಕೂಲವಾಗುವಂತೆ ಮಾಡಿದ್ದಾರೆ. ನೇತ್ರದಾನ ತೀರ್ಮಾನವನ್ನು ಗ್ರಾಮಸ್ಥರು ಪ್ರಶಂಸಿಸಿದ್ದಾರೆ.
ಅವರಿಗೆ ಸಹೋದರ ಇದ್ದಾರೆ. ಅಂತ್ಯಕ್ರಿಯೆ ಭಾನುವಾರ ಸಂಜೆ ನೆರವೇರಿತು.




**Top News** ನಟ ಶಿವರಾಜ್ ಕುಮಾರ್, ದುನಿಯಾ ವಿಜಿ ಭಾಗಿ

# ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಕಾಂಗ್ರೆಸ್: ಗೀತಾ ಶಿವರಾಜಕುಮಾರ್

ಸುದ್ದಿ-ಸಂಚಾರಿ
ಶಿರಾಳಕೊಪ್ಪ:
'ಯಾವುದೇ ಜಾತಿ ಧರ್ಮ ಇರಲಿ ಎಲ್ಲರನ್ನೂ ಒಟ್ಟಿಗೆ ಸಹಬಾಳ್ವೆಯಿಂದ ತೆಗೆದುಕೊಂಡು ಹೋಗುವ ಏಕೈಕ ಪಕ್ಷ ಕಾಂಗ್ರೆಸ್. ಈ ಹಿಂದೆ ಜಿಲ್ಲೆಯ ಜನರು ನಮ್ಮ ತಂದೆ ಬಂಗಾರಪ್ಪ ಅವರಿಗೆ ಆಶೀರ್ವಾದ ಮಾಡಿದ್ದರು. ಅದೇ ರೀತಿ ನನಗೂ ಒಂದು ಅವಕಾಶ ನೀಡಿ' ಎಂದು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ್ ಮನವಿ ಮಾಡಿದರು.

ಪಟ್ಟಣದ ಬಸ್ ನಿಲ್ದಾಣದ ವೃತ್ತದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ರೋಡ್ ಶೋನಲ್ಲಿ ಮಾತನಾಡಿದರು.

'ಯಾವುದೇ ಅಪಪ್ರಚಾರಕ್ಕೆ ಕಿವಿಗೊಡಬೇಡಿ. ನಾನು ನಿಮ್ಮ ಸೇವೆ ಮಾಡಲು ಸದಾ ಸಿದ್ಧ. ಗೆದ್ದ ನಂತರ ನನ್ನ ಕೆಲಸದ ಕಾರ್ಯವೈಖರಿ ನಿಮಗೂ ಗೊತ್ತಾಗುತ್ತದೆ. ಚುನಾವಣೆ ಮುಗಿದ ಮೇಲೆ ಗ್ಯಾರಂಟಿ ನಿಲ್ಲಿಸುತ್ತಾರೆ ಎನ್ನುವುದು ಶುದ್ಧ ಸುಳ್ಳು' ಎಂದು ತಿಳಿಸಿದರು.

'ಒಂದು ಬಾರಿ ನಿಮ್ಮ ಅಭ್ಯರ್ಥಿ ಗೀತಾ ಅವರನ್ನು ಗೆಲ್ಲಿಸಿ ನೋಡಿ. ಕಾಂಗ್ರೆಸ್ ನೀಡಿದ್ದ ಗ್ಯಾರಂಟಿ ನಿಮಗೆ ತಲುಪಿದೆ. ಆದರೆ ನಾನು ಗೀತಾ ಪರವಾಗಿ ಗ್ಯಾರಂಟಿ ಕೊಡುತ್ತೇನೆ. ಬೇರೆ ಯಾರೋ ಏನನ್ನೋ ನಮ್ಮ ಬಗ್ಗೆ ಮಾತನಾಡಬಹುದು. ಆದರೆ, ನಾನು ಅವರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಗೀತಾ ಅವರನ್ನು ಗೆಲ್ಲಿಸಿ ಕ್ಷೇತ್ರದ ಜನರ ಪರವಾಗಿ ಗಟ್ಟಿ ಧ್ವನಿಯಾಗಿ ಕೆಲಸ ಮಾಡುತ್ತಾರೆ' ಎಂದು ನಟ ಶಿವರಾಜಕುಮಾರ್ ಹೇಳಿದರು.

'ಮನುಷ್ಯರಾದ ನಾವು ರಾಜಕೀಯದಲ್ಲಿ ಜಾತಿ ಧರ್ಮ ಹುಡುಕಬಾರದು. ಎಲ್ಲರೂ ಒಂದೇ ಎಂದು ಭಾವಿಸಬೇಕು. ಬಡವರ ಹೊಟ್ಟೆ ತುಂಬಿಸುವುದು ಜಾತಿ ಧರ್ಮದಿಂದಲ್ಲ. ಅವರ ಹಸಿವನ್ನು ನೀಗಿಸುವುದರಿಂದ ಅಂತಹ ಕೆಲಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿ ತೋರಿಸಿದ್ದಾರೆ. ಹಾಗಾಗಿ, ಕಾಂಗ್ರೆಸ್ ಅಭ್ಯರ್ಥಿ ಗೀತಕ್ಕನನ್ನು ಒಂದು ಬಾರಿ ಗೆಲ್ಲಿಸಿ' ಎಂದು ನಟ ದುನಿಯಾ ವಿಜಯ್ ಹೇಳಿದರು.

ಮುಖಂಡರಾದ ನಾಗರಾಜಗೌಡ, ಗೋಣಿ ಮಾಲತೇಶ, ರಾಜಾಸಾಬ್, ಮಹೇಶ ತಾಳಗುಂದ ಇದ್ದರು.

## ಮಲೆನಾಡ ವಿಶ್ವಾಸ ಕಳೆದುಕೊಂಡ ಬಿಜೆಪಿ ಮತ್ತು ಕಾಂಗ್ರೆಸ್



ಸುದ್ದಿ-ಸಂಚಾರಿ
ಶಿವಮೊಗ್ಗ: 'ಬಿ.ಎಸ್. ಯಡಿಯೂರಪ್ಪ 9 ಬಾರಿ ಶಾಸಕ, 3 ಬಾರಿ ಮುಖ್ಯಮಂತ್ರಿ, ಒಮ್ಮೆ ಸಂಸದರಾದವರು. ಅವರ ಪುತ್ರ ಬಿ.ವೈ. ರಾಘವೇಂದ್ರ ಮೂರು ಬಾರಿ ಸಂಸದರಾದರೂ ಬಗರ್‌ಹುಕುಂ ಸಾಗುವಳಿದಾರರ ಸಮಸ್ಯೆ ಪರಿಹರಿಸಲಿಲ್ಲ. ಇಬ್ಬರೂ ಮಲೆನಾಡಿನ ಜನರ ವಿಶ್ವಾಸ ಕಳೆದುಕೊಂಡಿದ್ದಾರೆ' ಎಂದು ಪಕ್ಷೇತರ ಅಭ್ಯರ್ಥಿ ಕೆ.ಎಸ್. ಈಶ್ವರಪ್ಪ ವಾಗ್ದಾಳಿ ನಡೆಸಿದರು.'ಶಿವಮೊಗ್ಗದಲ್ಲಿ ಹಿಂದುತ್ವದ ಅಲೆ ಜೋರಾಗಿ ಬೀಸುತ್ತಿದೆ. ಗೆದ್ದ ಮೇಲೆ ಜನರ ಋಣ ತೀರಿಸುತ್ತೇನೆ. ಮತ ಪಡೆದು ಮೋಸ ಮಾಡುವುದಿಲ್ಲ. ಸುಮ್ಮನೇ ಭರವಸೆ ಕೊಡಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಕಾಲಿಗೆ ಬಿದ್ದಾದರೂ ಅನುದಾನ ತರುತ್ತೇನೆ' ಎಂದು ಭಾನುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.'ಬಿಜೆಪಿ ಅಪ್ಪ ಮಕ್ಕಳ ಕೈಯಲ್ಲಿದೆ ಎಂದು ಜನಸಾಮಾನ್ಯರು ಮಾತಾಡುತ್ತಾರೆ. ಅಲ್ಲಿ ಸಾಮೂಹಿಕ ನಾಯಕತ್ವಕ್ಕೆ ಮಂಗಳ ಹಾಡಲಾಗಿದೆ. ಯಡಿಯೂರಪ್ಪ ಜಾತಿ ರಾಜಕೀಯ ಮಾಡುತ್ತಿದ್ದಾರೆ. ಹೀಗಾಗಿ ಸಂಘ ಪರಿವಾರದ ಅನೇಕರು ನನ್ನ ಪರವಾಗಿ ಬೆಂಬಲಕ್ಕೆ ನಿಂತಿದ್ದಾರೆ' ಎಂದರು.'ಕ್ಷೇತ್ರದ ಅನೇಕ ಹಳ್ಳಿಗಳಿಗೆ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರು ಪ್ರಚಾರ ಮಾಡಿಲ್ಲ. ಟೇಬಲ್ ಹಾಕಲು ಆಗಲ್ಲ ಎಂದವರು ರಾಷ್ಟ್ರಭಕ್ತ ಬಳಗದ ಶಕ್ತಿ ಹೋಗಿ ನೋಡಿ ಬರಲಿ' ಎಂದು ಶಾಸಕ ಆರಗ ಜ್ಞಾನೇಂದ್ರ ವಿರುದ್ಧ ಪರೋಕ್ಷವಾಗಿ ಆಕ್ರೋಶ ವ್ಯಕ್ತಪಡಿಸಿದರು.'ಯಡಿಯೂರಪ್ಪ ಅವರು ಕಾಂಗ್ರೆಸ್‌ನವರೊಂದಿಗೆ ಆಂತರಿಕ ಒಪ್ಪಂದ ಮಾಡಿಕೊಂಡು ಚುನಾವಣೆ ಮಾಡುತ್ತಿದ್ದಾರೆ. ಮುಂದೆ ಬಹಿರಂಗವಾಗಿ ಮೈತ್ರಿ ಮಾಡಿಕೊಳ್ಳುವ ಅನುಮಾನವಿದೆ' ಎಂದರು.

## ಚುನಾವಣೆ ಸಂದರ್ಭದಲ್ಲಿ ರಾಜಕೀಯದವರಿಗೆ ನೆನಪಾದ: ಮಡಿವಾಳ ಸಮಾಜ



ಸುದ್ದಿ-ಸಂಚಾರಿ
ಆನವಟ್ಟಿ:
ಸೊರಬ ತಾಲ್ಲೂಕಿನ ಮಾಜಿ ಶಾಸಕ ಹಾಗೂ ಸಂಸದರಿಗೆ ಚುನಾವಣೆ ಸಂದರ್ಭದಲ್ಲಿ ಮಡಿವಾಳ ಸಮಾಜ ನೆನಪಾಗುತ್ತಿದೆ. ಸಮಾಜದ ಮುಖಂಡರು ಅನುದಾನಕ್ಕಾಗಿ ಅವರ ಮನೆ ಬಾಗಿಲಿಗೆ ಹೋದರು ಗೌರವ ನೀಡದ ನಾಯಕರು, ಈಗ ಚುನಾವಣೆಯ ಬಹಿರಂಗ ಸಭೆಗಳಲ್ಲಿ ಮಡಿವಾಳ ಸಮಾಜವನ್ನು ಪದೆ-ಪದೆ ಉಚ್ಚರಿಸುತ್ತಿದ್ದಾರೆ ಎಂದು ಶಿವಶರಣ ಮಡಿವಾಳ ಮಾಚಿದೇವ ಸಂಘದ ಅಧ್ಯಕ್ಷ ಪಿ. ಹನುಮಂತಪ್ಪ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಮಡಿವಾಳ ಸಮಾಜದ ದೊಡ್ಡ ಮುಖಂಡರು ಎಂದು ತಾವೇ ಬಿಂಬಿಸಿಕೊಂಡಿರುವ ಎನ್‌ಜೀರಪ್ಪ, ರಾಜು ತಲ್ಲೂರು, ಅರುಣಕುಮಾರ, ರಘು ಕೌಟಿಲ್ಯ ಅವರೇ ಜಿಲ್ಲೆ ಹಾಗೂ ತಾಲ್ಲೂಕಿಗೆ ನಿಮ್ಮ ಕೊಡುಗೆ ಏನು? ರಾಜ್ಯ ಹಾಗೂ ಕೇಂದ್ರದಲ್ಲಿ ನಿಮ್ಮದೆ ಪಕ್ಷದ ಆಡಳಿತದಲ್ಲಿ ಇತ್ತು, ಮಡಿವಾಳ ಸಮಾಜದ ಬಹಳಷ್ಟು ಜನರು ಬಗರ್ ಹುಕುಂ, ಅರಣ್ಯ ಪ್ರದೇಶದಲ್ಲಿ ವಾಸುತ್ತಿದ್ದಾರೆ. ಅವರಿಗೆ ಏಕೆ ಹಕ್ಕುಪತ್ರ ಕೊಡಿಸಲು ಸಾಧ್ಯವಾಗಲಿಲ್ಲ. ಕೇವಲ ನಿಮ್ಮ ಬೆಳವಣಿಗಾಗಿ ಮಡಿವಾಳ ಸಮಾಜವನ್ನು ಬಳಸಿಕೊಳ್ಳುತ್ತಿರುವುದು, ಕೀಳು ಮಟ್ಟದ ರಾಜಕರಣ ಎಂದು ಹರಿಹಾಯ್ದರು.

ಮಡಿವಾಳ ಸಮಾಜದ ಸಾವಿರಾರು ಜನರಿಗೆ ಹಕ್ಕುಪತ್ರ ಕೊಟ್ಟ, ಎಸ್.ಬಂಗಾರಪ್ಪ, ದೇವರಾಜ್ ಅರಸು, ಕಾಗೋಡು ತಿಮ್ಮಪ್ಪ, ಮಾಚಿದೇವ ಜಯಂತಿ ಮತ್ತು ಸಮಾಜದ ಅಭಿವೃಧಿಗೆ ನಿಗಮ ಮಂಡಳಿ ಸ್ಥಾಪನೆ ಮಾಡಿರುವ ಸಿದ್ದರಾಮಯ್ಯ ಹಾಗೂ ಹಿಂದುವರ್ಗದ ನಾಯಕರಾಗಿ ರಾಜ್ಯ ಮಟ್ಟದಲ್ಲಿ ಬೆಳೆಯುತ್ತಿರುವ ಸಚಿವ ಎಸ್.ಮಧು ಬಂಗಾರಪ್ಪ ನಿಜವಾದ ಹಿಂದುಳಿದ ವರ್ಗದ ನಾಯಕರು ಎಂದರು.

ಯಾವ ಪಕ್ಷ ಮಡಿವಾಳರಿಗೆ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರ ನೀಡಿದೆ ಎಂಬುವುದು ಸಮುದಾಯದ ಜನರಿಗೆ ಗೊತ್ತು. ಮತ ಚಲಾಯಿಸುವುದು ಅವರ ಸ್ವಂತ ಅಭಿಪ್ರಾಯ, ಕೆಲವು ಮುಖಂಡರು ಸ್ವಾರ್ಥ ರಾಜಕರಣಕ್ಕಾಗಿ ಏಕಮುಖವಾಗಿ ಒಂದು ಪಕ್ಷಕ್ಕೆ ಮತ ಹಾಕಿ ಎನ್ನುವವರಿಗೆ ಸಮುದಾಯವರೇ ತಕ್ಕ ಪಾಠ ಕಲಿಸುತ್ತಾರೆ ಎಂದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಪ್ರಭಾಕರ, ಕಾರ್ಯದರ್ಶಿ ಅಶ್ವಿನಿಕುಮಾರ್, ಮುಖಂಡರಾದ ರಾಜಶೇಖರ್, ಹೆಗ್ಗಪ್ಪ ಇದ್ದರು.

### ಸಾಗರ

ಸಾಗರ: 'ಸಂವಿಧಾನವನ್ನು ಬದಲಿಸು ತ್ತೇವೆ ಎಂದು ಹೇಳುವ ಮೂಲಕ ಬಿಜೆಪಿ ಮುಖಂಡರು ದಲಿತ ವಿರೋಧಿ ನಿಲುವು ತಾಳಿದ್ದಾರೆ. ಈ ಕಾರಣಕ್ಕೆ ಲೋಕಸಭೆ ಚುನಾವಣೆಯಲ್ಲಿ ದಲಿತ ಸಮುದಾಯದವರು ಬಿಜೆಪಿಗೆ ತಕ್ಕ ಪಾಠ ಕಲಿಸಬೇಕು' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಬಣ) ತಾಲ್ಲೂಕು ಸಂಚಾಲಕ ಲಕ್ಷ್ಮಣ್ ಸಾಗರ್ ಮನವಿ ಮಾಡಿದರು.

'ಸಂವಿಧಾನವೇ ನಮಗೆ ಅಧಿಕಾರ ನೀಡಿರುವುದು ಎಂಬುದನ್ನು ಬಿಜೆಪಿ ಮುಖಂಡರು ಮರೆತಿದ್ದಾರೆ. ಯಾರು ಸಂವಿಧಾನ ಬದಲಿಸುತ್ತೇವೆ ಎನ್ನುತ್ತಾರೊ ಅವರು ಸಮಾನತೆಯ ಆಶಯಕ್ಕೆ ವಿರುದ್ಧ ಎಂದರ್ಥ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. 'ಹಲವು ಯೋಜನೆಗಳ ಮೂಲಕ ಸಾಮಾಜಿಕ ನ್ಯಾಯ ಸಿದ್ಧಾಂತದ ಪರವಾಗಿರುವ ಕಾಂಗ್ರೆಸ್ ಗೆ ದಲಿತರು ಬೆಂಬಲಿಸಬೇಕು' ಎಂದು ನಗರಸಭೆ ಮಾಜಿ ಸದಸ್ಯ ರವಿ ಜಂಬಗಾರು ಮನವಿ ಮಾಡಿದರು. ವೆಂಕಟೇಶ್ ಇದ್ದರು.



ಆನವಟ್ಟಿ

ಆನವಟ್ಟಿಯಲ್ಲಿ ಭಾನುವಾರ ನಡೆದ ಕಾಂಗ್ರೆಸ್ ರೋಡ್ ಶೋನಲ್ಲಿ ಸಚಿವ ಮಧು ಬಂಗಾರಪ್ಪ, ಲೋಕಸಭಾ ಅಭ್ಯರ್ಥಿ ಗೀತಾ ಶಿವರಾಜಕುಮಾರ್, ನಟ ಶಿವರಾಜಕುಮಾರ್, ಚಿತ್ರನಟ ದುನಿಯಾ ವಿಜಯ್ ಭಾಗವಹಿಸಿದ್ದರು

**Top News** ಸಚಿವ ಮಧು ಬಂಗಾರಪ್ಪ

# ‘ಕಾಂಗ್ರೆಸ್‌ನ ಗ್ಯಾರಂಟಿ ಮೇಲೆ ಜನರಿಗೆ ಹೆಚ್ಚು ವಿಶ್ವಾಸವಿದೆ.

ಸುದ್ದಿ-ಸಂಚಾರಿ
ಆನವಟ್ಟಿ:
ಕಾಂಗ್ರೆಸ್‌ನ ಗ್ಯಾರಂಟಿ ಮೇಲೆ ಜನರಿಗೆ ಹೆಚ್ಚು ವಿಶ್ವಾವಿದೆ. ನುಡಿದಂತೆ ನಡೆದಿದ್ದೇವೆ ಹಾಗಾಗಿ ಸುಳ್ಳು ಭರವಸೆಗಳ ಮೋದಿ ಅಲೆ ಇಲ್ಲ. ಈಗ ಏನಿದ್ದರು ದೇಶದಲ್ಲಿ ಕಾಂಗ್ರೆಸ್ ಅಲೆ ಇದೆ ಎಂದು ಸಚಿವ ಮಧು ಬಂಗಾರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಭಾನುವಾರ ಆನವಟ್ಟಿಯ ಪ್ರಮುಖ ಬೀದಿಗಳಲ್ಲಿ ಕಾಂಗ್ರೆಸ್ ಪಕ್ಷ ಅಭ್ಯರ್ಥಿ ಗೀತಾ ಶಿವರಾಜ್‌ಕುಮಾರ ಪರ ಮತಯಾಚನೆಯ ಬೃಹತ್ ರೋಡ್ ಶೋನಲ್ಲಿ ಪಾಲ್ಗೊಂಡು ಮಾತನಾಡಿದರು.

ಚಿತ್ರನಟ ದುನಿಯಾ ವಿಜಯ್ ಮಾತನಾಡಿ, ಬಂಗಾರಪ್ಪ ಹುಟ್ಟಿದ ಪುಣ್ಯ ಭೂಮಿಯಲ್ಲಿ, ಅವರ ಮಗಳ ಪರವಾಗಿ ಮತ ಕೇಳಲು ನಾನು ಬಂದಿರುವುದು ನನಗೆ ಹೆಮ್ಮೆ ಎನ್ನಿಸುತ್ತಿದೆ. 32 ವರ್ಷಗಳ ಹಿಂದೆ ರೈತರ, ಬಡವರ ಹಾಗೂ ಎಲ್ಲಾ ವರ್ಗದ ಜನರ ಕಷ್ಟ ಅರಿತು. ರೈತರ ಪಂಪ್‌ಸೇಟ್‌ಗಳಿಗೆ ಉಚಿತ ವಿದ್ಯುತ್ ಸೇರಿದಂತೆ ಅನೇಕ ಯೋಜನೆಗಳನ್ನು ರಾಜ್ಯದ ಜನರಿಗೆ ಕೊಟ್ಟಿದ್ದಾರೆ. ಅವರ ಹಾದಿಯಲ್ಲೇ ನಡೆಯುವ ಗೀತಾ ಅವರು ಕೂಡ ಬಡವರ ಸೇವೆ ಮಾಡಲು ಬಂದಿದ್ದಾರೆ. ಹಣ ಮಾಡಲು ಅಲ್ಲ. ನಿಮ್ಮ ಊರಿನ ಭಾಗ್ಯಲಕ್ಷ್ಮೀಗೆ, ವಿಜಯಲಕ್ಷ್ಮೀ ಕೊಟ್ಟು ದೆಹಲಿಗೆ ಕಳುಹಿಸಬೇಕು ಎಂದು ಮನವಿ ಮಾಡಿದರು.

ಮಧು ಬಂಗಾರಪ್ಪ ತಾಲ್ಲೂಕಿನ 8 ಸಾವಿರ ಬಗರ್ ಹುಕುಂ ರೈತರಿಗೆ ಹಕ್ಕುಪತ್ರ ನೀಡಿದ್ದಾರೆ. ತಂದೆ ಬಂಗಾರಪ್ಪ ಅಡಳಿತ ಅವಧಿಯಲ್ಲಿ ಬಡವರ, ಕೂಲಿ ಕಾರ್ಮಿಕರ ಪರವಾಗಿ ಕೆಲಸ ಮಾಡಿದ್ದಾರೆ. ನಾನು ತಂದೆ ಹಾಗೂ ತಮ್ಮನ ಹಾದಿಯಲ್ಲಿ ರೈತರ ಹಾಗೂ ಜಿಲ್ಲೆಯ ಜನರ ಸೇವೆ ಮಾಡುತ್ತೇನೆ. ನನಗೆ ಹೆಚ್ಚಿನ ಮತ ನೀಡಿ ಹಾರೈಸಬೇಕು ಎಂದು ಕೋರಿಕೊಂಡರು.

ಹ್ಯಾಟ್ರಿಕ್ ಹಿರೋ ಶಿವರಾಜ್‌ಕುಮಾರ್ ಪತ್ನಿ ಪರ ಮತಯಾಚನೆ ಮಾಡಿ, ಜೋಗಿ ಚಿತ್ರದ ಡೈಲಾಗ್ ಹಾಗೂ ಜನಪ್ರೀಯ ಚಿತ್ರಗಳ ಹಾಡುಗಳನ್ನು ಹೇಳಿ ರಂಜಿಸಿದರು. ದುನಿಯಾ ವಿಜಯ್ ಅವರು ಕೂಡ ಸಿನಿಮಾ ಡೈಲಾಗ್‌ಗಳನ್ನು ಹೇಳಿದರು. ಅಪಾರವಾಗಿ ಸೇರಿದ್ದ ಜನಸ್ತೋಮ ಕೇಕೆ, ಸೀಳ್ಳೆ, ಚಪ್ಪಾಳೆ ಹೊಡೆದು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕೆ.ಪಿ ರುದ್ರಗೌಡ, ಸದಾನಂದ ಗೌಡ ಬಿ. ಪಾಟೀಲ್, ಸಂಜೀವ ತರಕಾರಿ, ಆರ್.ಟಿ ಮಂಜುನಾಥ, ದೇವರಾಜ್ ತ್ಯಾವರೆತೆಪ್ಪ, ವಿಜಯ ಶಕುನವಳ್ಳಿ, ಎಲ್.ಜಿ ಮಾಲತೇಶ್, ಹಬೀಬುಲ್ಲಾ ಹವಾಲ್ದಾರ್, ವಿಶಾಲಕ್ಷಮ್ಮ ಇದ್ದರು.

# ಗೀತಾ, ಶಿವರಾಜ್ ಕುಮಾರ್, ದುನಿಯಾ ವಿಜಿ ಭರ್ಜರಿ ರೋಡ್ ಶೋ

ಸುದ್ದಿ ಸಂಚಾರಿ | ಶಿಕಾರಿಪುರ

ಶಿಕಾರಿಪುರ: ಪಟ್ಟಣದಲ್ಲಿ ಭಾನುವಾರ ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ್ ರೋಡ್ ಶೋ ಮೂಲಕ ಭರ್ಜರಿ ಪ್ರಚಾರ ನಡೆಸಿದರು.

ಪಟ್ಟಣದ ಹುಚ್ಚರಾಯಸ್ವಾಮಿ ದೇವಸ್ಥಾನದಲ್ಲಿ ನಟರಾದ ಶಿವರಾಜಕುಮಾರ್ ಹಾಗೂ ದುನಿಯಾ ವಿಜಯ್ ಅವರೊಂದಿಗೆ ವಿಶೇಷ ಪೂಜೆ ಸಲ್ಲಿಸಿದರು. ಪೂಜೆ ಸಲ್ಲಿಸಿದ ನಂತರ ರೋಡ್ ಶೋ ಆರಂಭವಾಯಿತು. ಗೀತಾ ಶಿವರಾಜಕುಮಾರ್ ತೆರೆದ ವಾಹನದ ಮೂಲಕ ತೇರು ಬೀದಿ, ಮಿಡ್ಲ್ ಸ್ಕೂಲ್ ರಸ್ತೆ ಮೂಲಕ ಖಾಸಗಿ ಬಸ್ ನಿಲ್ದಾಣದವರೆಗೆ ರೋಡ್ ಶೋ ನಡೆಸಿ ಮತಯಾಚಿಸಿದರು. ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಪಾಲ್ಗೊಂಡಿದ್ದರು.

‘ಈ ಬಾರಿ ಲೋಕಸಭೆ ಚುನಾವಣೆಯಲ್ಲಿ ತಾಲ್ಲೂಕಿನ ಮತದಾರರು ಬದಲಾವಣೆ ತರಬೇಕು. ಜಿಲ್ಲೆಯಲ್ಲಿ ಹೊಸ ಅಲೆ ಬರಬೇಕು. ನಾನು ಹೀರೋ ಅಗಿ ಜಿಲ್ಲೆಗೆ ಬಂದಿಲ್ಲ. ಗೀತಾ ಗಂಡನಾಗಿ ಬಂದಿದ್ದೇನೆ. ಹೀರೋ ಆಗಿ ಬಂದರೆ ನನ್ನ ಸ್ಟೈಲ್ ಬೇರೆ ಇರುತ್ತದೆ. ಗೀತಾಗೆ ನಿಮ್ಮ ಸೇವೆ ಮಾಡಲು ಅವಕಾಶ ನೀಡಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆ ನೀಡುವ ಮೂಲಕ ನುಡಿದಂತೆ ನಡೆದಿದೆ. ಗೀತಾ ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಬೇಕು’ ಎಂದು ನಟ ಶಿವರಾಜಕುಮಾರ್ ಮನವಿ ಮಾಡಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಜಾತಿ ಧರ್ಮ ನೋಡದೇ ಎಲ್ಲರನ್ನೂ ಸಮನಾಗಿ ಕಾಣುವ ಮೂಲಕ ಆಡಳಿತ ನಡೆಸುತ್ತಿದ್ದಾರೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದ ಆಶಯದಂತೆ ಅಡಳಿತ ನಡೆಸುತ್ತಿದ್ದಾರೆ. ಕಾಂಗ್ರೆಸ್ ಹಿಂದೂ ಹಾಗೂ ಮುಸ್ಲಿಂ ಧರ್ಮಗಳ ಮಧ್ಯೆ ವೈಷಮ್ಯ ಬೆಳೆಸುವವರನ್ನು ಚುನಾಣೆಯಲ್ಲಿ ದೂರವಿಡಬೇಕು. ಶಿಕಾರಿಪುರಕ್ಕೆ ಬಂದಿದ್ದೇವೆ. ಈ ಚುನಾವಣೆಯಲ್ಲಿ ಶಿಕಾರಿ ಆಡುತ್ತೇನೆ. ಗೀತಕ್ಕ ಎಲ್ಲ ಧರ್ಮ ಜಾತಿಯವರನ್ನು ಸಮನವಾಗಿ ಕೊಂಡೊಯ್ಯುತ್ತಾರೆ. ಬಂಗಾರದ ಕಳಸದಂತಿರುವ ಅವರನ್ನು ಈ ಚುನಾವಣೆಯಲ್ಲಿ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಬೇಕು’ ಎಂದು ನಟ ದುನಿಯಾ ವಿಜಯ್ ಮನವಿ ಮಾಡಿದರು.

‘ಬಿಜೆಪಿ ನಾಯಕರು ಮಹಿಳೆಯರ ಮಂಗಳಸೂತ್ರದ ಬಗ್ಗೆ ಕೀಳಾಗಿ ಮಾತನಾಡುತ್ತಿದ್ದಾರೆ. ನಮ್ಮ ಮನೆ ಬೆಂಗಳೂರಿನಲ್ಲಿರುವ ಬಗ್ಗೆ ಮಾತ್ರ ಮಾತನಾಡುತ್ತಾರೆ. ಬಿಜೆಪಿ ನಾಯಕರ ಹಲವು ಮನೆಗಳು ಬೆಂಗಳೂರಿನಲ್ಲಿವೆ. ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿ ಯೋಜನೆ ನೀಡಿದೆ. ಈ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿ ನಿಮ್ಮ ಮಧ್ಯೆ ಇದ್ದು ನಿಮ್ಮ ಧ್ವನಿಯಾಗಿ ಕೆಲಸ ಮಾಡುತ್ತೇನೆ’ ಎಂದು ಗೀತಾ ಶಿವರಾಜಕುಮಾರ್ ಕೋರಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಪಿ. ನಾಗರಾಜಗೌಡ, ಕೆಪಿಸಿಸಿ ಸದಸ್ಯ ಗೋಣಿ ಮಾಲತೇಶ್, ಮುಖಂಡರಾದ ಚಂದ್ರಕಾಂತ ಪಾಟೀಲ್, ಉಮೇಶ್ ಮಾರವಳ್ಳಿ, ಶಿವ್ಯಾನಾಯ್ಕ, ಉಳ್ಳಿದರ್ಶನ್, ಭಂಡಾರಿ ಮಾಲತೇಶ್, ವಕೀಲ ನಿಂಗಪ್ಪ, ಬುಡೇನ್ ಸಾಬ್, ಬಡಗಿ ಫಾಲಾಕ್ಷ ರಾಘುನಾಯ್ಕ, ಕಬೂತರ್, ಗಾಮ ದಯಾನಂದ್ ಇದ್ದರು

## ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜ್ ಕುಮಾರ್ ಪ್ರಚಾರ



ಶಿಕಾರಿಪುರದಲ್ಲಿ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಸಾವಿರಾರು ಕಾರ್ಯಕರ್ತರು ಭಾಗವಹಿಸಿದ್ದರು.